**ವ್ಯಾಖ್ಯಾನ**

# <u>ಶರಣು ಸಿದ್ಧಿ ವಿನಾಯಕ</u>

ಕೀರ್ತನೆಯ ಚಿಂತನೆ:

**ಶರಣು ಸಿದ್ಧಿ ವಿನಾಯಕ**
**ಶರಣು ವಿದ್ಯ ಪ್ರದಾಯಕ II ಪ II**

**ಶರಣು ಪಾರ್ವತಿ ತನಯ ಮೂರುತಿ**
**ಶರಣು ಮೂಷಕ ವಾಹನ II ಅಪ II**

**ನಿಟಿಲ ನೇತ್ರನೆ ದೇವಿ ಸುತನೇ**
**ನಾಗಭೂಷಣ ಪ್ರಿಯನೇ**
**ತಟಿಲ್ಲ ತಾಂಕಿತ ಕೋಮಲಾಂಗನೆ**
**ಕರ್ಣ ಕುಂಡಲ ಧಾರನೆ II 1 II**

**ಬಟ್ಟ ಮುತ್ತಿನ ಪದಕ ಹಾರನೆ**
**ಬಾಹು ಹಸ್ತ ಚತುಷ್ಟನೆ**
**ಇಟ್ಟ ತೊಡುಗೆಯ ಹೇಮ ಕಂಕಣ**
**ಪಾಶ ಅಂಕುಶಧಾರನೆ II 2 II**

**ಕುಕ್ಷಿ ಮಹಾ ಲಂಬೋದರನೆ**
**ಇಕ್ಷುಚಾಪನ ಗೆಲಿದನೆ**
**ಪಕ್ಷಿ ವಾಹನ ಸಿರಿ ಪುರಂದರ**
**ವಿಠಲನ ನಿಜ ದಾಸನೆ II 3 II**

ಆರಂಭದಲ್ಲಿ ವಿನಾಯಕನಿಗೆ ಭಕ್ತಿಪೂರ್ವಕ ನಮನ. ಎಂಥ ವಿನಾಯಕ? 'ಸಿದ್ಧಿ ವಿನಾಯಕ' ನಮ್ಮ ಮನದಾಸೆಗಳನ್ನು ಸಾಧಿಸಿ ಕೊಡುವ ಗಣಪತಿ. ಬೇಡಿದ ವಿದ್ಯೆ ಪರವಿದ್ಯೆಗಳ ಪ್ರದಾಯಕ.
ಈತನ ಹಿರಿಮೆ ನೋಡಿ. ದೇವೇಂದ್ರ ಸಹಿತ ಎಲ್ಲ ದೇವತೆಗಳಿಂದ ವಂದಿತ. ಋಷಿ, ಮುನಿಗಣ ಈತನನ್ನು ಸೇವಿಸಿ ಸ್ತುತಿಸುತ್ತಾರೆ. ತಮ್ಮ ಕೆಲಸ ನಿರ್ವಿಘ್ನವಾಗಿ ನೆರವೇರಲು.

ಈತ ಮುಕ್ಕಣ್ಣ ಶಿವನ - ಸತಿ ಪಾರ್ವತಿಯ ತನುಜಾತ.  ಶಿವನಿಗೆ ಪ್ರಿಯ ಸುತ.
ಹೊನ್ನಿನ ಕಿರೀಟ.  ಹೊಳೆಯುವ ಕರ್ಣಕುಂಡಲ.  ಬಂಗಾರದ ಪದಕದ, ಮುತ್ತು- ರತ್ನದ ಹಾರ, ಕೊರಳಿಗೆ ಅಲಂಕಾರ.  ಬಿಗಿದುಟ್ಟ ಪೀತಾಂಬರ.  ಹೇಮಕಂಕಣ ಭೂಷಿತ ಚತುರ್ಬಾಹು.  ಪಾಶ ಅಂಕುಶಧರ.  ಲಂಬೋದರ.  ಮೂಷಿಕ ವಾಹನ.  ಕಾಮನ ಗೆದ್ದ ಬ್ರಹ್ಮಚಾರಿ.  ಅಪ್ಪಟ ವಿಷ್ಣುಭಕ್ತ. ವಿಠ್ಠಲನ ನಿಜದಾಸ.  ಈತನ ಅನುಗ್ರಹ ಸಾಧನೆಗೆ ಸೋಪಾನ.

**ಹರಿಕಥಾಮೃತಸಾರದಲ್ಲಿ ಗಣನಾಥನ ಸ್ತುತಿ --**

ಹರಿಯ ಭಕ್ತ.  ಹರನ ಸುತ.  ಗಣನಾಥ.  ಕರಿವದನನೀತ.  ಅಗ್ರ ಪೂಜಿತ.  ಭಗ್ನ ದಂತ.  ವಿಘ್ನ ನಾಶಕ. ತ್ರಿಜಗ ವಂದಿತ.

ಭಕ್ತ ಪ್ರಿಯ.  ಭಕ್ತರಿಗೆ ಪ್ರಿಯ.  ಪಾರ್ವತಿಯ ಪ್ರಿಯ ಪುತ್ರ.  ವೇದವ್ಯಾಸ ಕರುಣಾ ಪಾತ್ರ.
ವ್ಯಾಸರ ಆಯ್ಕೆಯ ಲೇಖಕಾಗ್ರಣಿ.  ಅದ್ಭುತ ಶೀಘ್ರ ಲಿಪಿಕಾರ.
ವೇದವ್ಯಾಸರಿಗೇ ಶರತ್ತು.
'ತಾ ಬರೆಯುವದು.  ಅವರು ಹೇಳುವದು ನಡುವೆ ನಿಲ್ಲಬಾರದು.  ನಿರಂತರವಾಗಿರ ಬೇಕು' ಎಂದ ಗಣಪ.
'ತಾನು ಹೇಳಿದ್ದು ತಿಳಿಯದೇ ತಾ ಬರೆಯಬಾರದು' - ಮಹರ್ಷಿಗಳ ಮರು ಶರತ್ತಿಗೆ ಶಿರಬಾಗಿದ.
ನುಡಿದಂತೆ ನಡೆದ ಧೀರ.  ಮಹಾಭಾರತ ತಿಳಿದು ವಿಸ್ತರಿಸಿ ಬರೆದು ದಾಖಲಿಸಿದ ಮೊದಲ ಮಹಾ ಮಹಿಮ.
ವಿಶ್ವಂಭರ ಉಪಾಸಕ ವಿನಾಯಕ.  ವಿಶ್ವ ನಾಮಕ ಪರಮಾತ್ಮ.  ಕುಕ್ಷಿ ಮಹ ಲಂಬೋದರನೆ ಬಲಗಣ್ಣಿನಲ್ಲಿದ್ದು ಎಲ್ಲರಿಗೂ ಜಾಗ್ರತ ಅವಸ್ಥಾ ಪ್ರದಾಯಕ.  ನಿಯಾಮಕ.  ಈ ವಿಶ್ವರೂಪನಿಗೆ ಹತ್ತೊಂಬತ್ತು ಮುಖ.  ಬಲಕೆ, ಎಡಕೆ ಒಂಬೊತ್ತು, ನಡಕೆ ಒಂದು.
ನಡುವಿನ ಮುಖವೇ ಗಜಮುಖ.  ವಿಶ್ವರೂಪ.  ಈ ರೂಪ ಉಪಾಸಕ ಗಜಾನನ.  'ಬಿಂಬದಂತೆ ಪ್ರತಿಬಿಂಬ'.  ಅದಕ್ಕಾಗಿ ಪ್ರತಿಬಿಂಬ ಗಣಪತಿಗೆ ಗಜಮುಖ.  ವಿಶ್ವಂಭರ ಹರಿಗೆ ಅತಿ ಪ್ರಿಯನೀತ.

**ಮೊದಲ ಪೂಜೆ ಗಣಪತಿಗೆ.**

ಮದುವೆ ಇರಲಿ, ಮುಂಜಿವೆ ಇರಲಿ, ಮನೆ ಕಟ್ಟುವದಿರಲಿ, ಹೋಮ ಹವನಗಳಾಗಲಿ, ಯಾವ ಮಂಗಳ ಕಾರ್ಯವೇ ಆಗಲಿ, ಈತನಿಗೆ ಸ್ತುತಿಸಿ, ನಮಿಸಿ, ಒಲಿಸಿಯೇ ಶುಭ ಕಾರ್ಯಗಳ ಆರಂಭ.
ನಡುನಡುವೆ ಬರುತಿಪ್ಪ ವಿಘ್ನಗಳ ತಡೆವನು, ಭಗವನ್ನಾಮ ಕೀರ್ತನೆ ಅಡೆತಡೆ ಇಲ್ಲದೆ ನಿರಂತರ ನುಡಿಸುವನು, ನಡೆಸುವನು, ಕಾರ್ಯಗಳು ಯಶಸ್ವಿಯಾಗಿ ಪೂರ್ಣವಾಗುವವು.

ಆರಂಭದಲ್ಲಿ ಗಣಪನ ಪೂಜಿಸಿ ಯಶಸ್ಸು ಕಂಡವರು ಬಹಳ. ಮೊದಲು ನಿನ್ನ ಪೂಜಿಸದೇ ದುರಂತ ಕಂಡವರೂ ಅನೇಕ.
ಇದು ಶ್ರೀ ಹರಿಯ ಇಚ್ಛೆ, ಗಣಪತಿಗೆ ವರದಾನ.
ಶಕ್ರ - ದೇವೇಂದ್ರ ನಿನ್ನ ಪೂಜಿಸಿ ನಿರ್ವಿಘ್ನವಾಗಿ ಅಸುರರ ಸಂಹರಿಸಿದ. ಜಯ ಗಳಿಸಿದ.

ಲೋಕ ಶಿಕ್ಷಣಕ್ಕಾಗಿ ಶ್ರೀ ರಾಮ ನಿನ್ನ ಪೂಜಿಸಿಯೇ ಸೇತುಬಂಧ ಆರಂಭಿಸಿದ. ಯಶಸ್ವಿಯಾದ.
ಧರ್ಮರಾಜ, ಚಕ್ರಪಾಣಿಯ ಮಾತಿನಂತೆ ನಿನ್ನ ಪೂಜಿಸಿದ. ಯುುದ್ಧದಲ್ಲಿ ಜಯವ ಕಂಡ.
ಆರಂಭದಲಿ ನಿನ್ನ. ಪೂಜಿಸದ ದುರ್ಯೋಧನ ಏನಾದ?
ಭೀಮನ ಗದೆಗೆ ಸಿಕ್ಕ. ನಿಜಕುಲ ಸಹಿತ ನಾಶವೈದಿದ.
ಹೀಗಿದೆ, ಗಣಪತಿಯಲ್ಲಿ ಶ್ರೀ ಹರಿಯ ವಿಶೇಷ ಸಾನಿಧ್ಯ, ಅನುಗ್ರಹ.
ವಿದ್ಯಾಧೀಶ, ವಿದ್ಯಾಧಿಪತಿ, ವಿದ್ಯಾ ಪ್ರದಾಯಕ. ಈತ.
ಅಧ್ಯಾತ್ಮವಿರಲಿ, ಲೌಕಿಕವಿರಲಿ, ಆರಂಭದಲಿ ಹೇರಂಭನಿಗೆ ನಮಿಸಿ. ವಿಘ್ನನಾಶ, ಯಶಸ್ಸು ಕಟ್ಟಿಟ್ಟ ಬುತ್ತಿ. ಅಷ್ಟೇ ಅಲ್ಲ. ಕ್ಷಿಪ್ರ ಫಲದಾಯಕನೀತ. ಭಜಿಸೆ ಭಕ್ತಿಲಿ ಬೇಡಿದನ್ನು, ಇವನಷ್ಟು ಶೀಘ್ರ ಕೊಡುವ ದೈವ ಮತ್ತೊಂದಿಲ್ಲ. ಈತ ತತ್ವಾಭಿಮಾನಿ. ಆಕಾಶದ ಅಧಿಪತಿ. ನಮ್ಮ ಗಣಪತಿ. ಶಬ್ದಕ್ಕೆ ಅವಕಾಶ, ಸರ್ವಕ್ಕೆ ಅವಕಾಶ. ಇದು ಆಕಾಶದ ಗುಣ. ಇದರ ನಿಯಾಮಕನೀತ. ಶಬ್ದ ರಾಶಿಯೇ ವೇದಶಾಸ್ತ್ರ. ಅದಕ್ಕಾಗಿ ಈ ಜ್ಞಾನಕ್ಕಾಗಿ ಗಣಪತಿಗೆ ಪ್ರಾರ್ಥನೆ. ಮೂಕರನು ವಾಗ್ಮಿಗಳಾಗಿ ಮಾಳ್ಪ.

**ಮೂಷಿಕ ವಾಹನ. -**

ಇಲಿಯ ರೂಪದಿ ಬಳಿ ಬಂದ ದೈತ್ಯನನ್ನು ಪರಾಭವಗೊಳಿಸಿದ. ಅವನನ್ನೇ ತನ್ನ ವಾಹನವನ್ನಾಗಿ ಮಾಡಿಕೊಂಡ ಮಹಿಮೆ ಗಣೇಶನದು.
ತಾಪತ್ರಯ ನಿವಾರಕ. ಮಂಗಳ ಚರಿತ. ಶುಭಗುಣ ಭರಿತ.
ಎಲ್ಲಕ್ಕೂ ಗಜಾನನನ್ನು ಪ್ರಾರ್ಥಿಸ ಬೇಕು. ಏನೇನನ್ನು ಪ್ರಾರ್ಥಿಸ ಬೇಕು? --
ಸಜ್ಜನರ ಸಹವಾಸ ಕೊಡು. ದುರ್ವಿಷಯಗಳ ದೂರ ಮಾಡು.
**'ಶ್ರೀ ಹರಿ ಈಶ - ನಾವು ಅವನ ದಾಸ'** ರೆಂಬ ಸುಜ್ಞಾನ ನೀಡು.
ಸರ್ವೋತ್ತಮ, ಸರ್ವ ಪ್ರೇರ್ಯ ಪ್ರೇರಕ, ಮಾಡಿ ಮಾಡಿಸುವ, ಶ್ರೀ ಹರಿ, ಪಂಚಭೇದ ತಾರತಮ್ಯ. ಈ ಎಲ್ಲ ಸಮೀಚೀನ ಜ್ಞಾನ ನಿರಂತರವಾಗಿರಲಿ. ಅಂತು ಅನುಗ್ರಹಿಸು.
ವ್ಯಾಸ ಕೃತ ಗ್ರಂಥಗಳ ತಿಳಿದು ಬರೆದು ವಿಸ್ತರಿಸಿದವ ನೀನು. ಅವುಗಳ ರಹಸ್ಯಾರ್ಥ ತಿಳಿಸಿ ನಮ್ಮನುದ್ಧರಿಸು. ವಿದ್ಯೆ, ಬುದ್ಧಿ ಕೊಡು. ಜ್ಞಾನ ಭಕ್ತಿ ವಿರಕ್ತಿ ನೀಡು. ಹರಿಸ್ತುತಿ ಸದಾ ನನ್ನ ವದನದಲಿರಲಿ. ಅಂತು ಅನುಗ್ರಹಿಸು ಕರುಣಾ ಸಮುದ್ರ.

**ಗಣಪತಿಯ ಜನನವೂ ವಿಶಿಷ್ಟ ರೀತಿಯದು.**

ಮೃದ್ಭವನೀತ.  ದೇವಿ ಪಾರ್ವತಿ ತನ್ನ ತನುವಿನ ಸೂಕ್ಷ್ಮ ಪೃಥ್ವಿ ಅಂಶದಿಂದ ಗಣಪತಿಯನ್ನು ಸೃಷ್ಟಿಸಿದಳು. ಅಪಾರ ಸಾಮರ್ಥ್ಯ ಅವಳದು.  ಮಹದೇವರಿಂದ ಅನುಗ್ರಹಿತೆ ಅವಳು.
ಆಕಾಶ ತತ್ವದ ಅಧಿಪತಿ, ಪೃಥ್ವೀ ತತ್ವದಿಂದ ಸೃಷ್ಟಿಯಾದದ್ದೊಂದು ವಿಶೇಷ.

**ಏಕವಿಂಶತಿ ಮೋದಕ ಪ್ರಿಯ. –**

ಇಪ್ಪತ್ತೊಂದು ಮೋದಕಗಳೆಂದರೆ ಇಪ್ಪತ್ತೊಂದು ತತ್ವಗಳು.  (ಪಂಚ ಕರ್ಮೇಂದ್ರಿಯ + ಪಂಚ ಜ್ಞಾನೇಂದ್ರಿಯ + ಪಂಚ ಮಹಾಭೂತ + ಪಂಚ ತನ್ಮಾತ್ರಾ + ಮನಸ್ಸು)
ಈ ತತ್ವಗಳಿಗ ಒಡೆಯ ಮುಖ್ಯ ಪ್ರಾಣ ತತ್ವ.  ಇವೆಲ್ಲರಿಗೂ ಸರ್ವ ತತ್ವಗಳಿಗೂ ಒಡೆಯ ಶ್ರೀ ಲಕ್ಷ್ಮೀ ನರಸಿಂಹ.  ಇವೆಲ್ಲ ತತ್ವಗಳ ಪ್ರಿಯ ಗಣಪತಿ.
ಹೀಗೆ ಏಕವಿಂಶತಿ ಮೋದ ಕೊಡುವ ತತ್ವಗಳ - ಮೋದಕ ಪ್ರಿಯ ವಿನಾಯಕ.

**ಈ ಭಾದ್ರಪದ ಶುಕ್ಲ ಚತುರ್ಥಿಯಂದು -**

ಅಂತರಿಕ್ಷದಿಂದ ಧರೆಗಿಳಿಯುತ್ತಾನೆ.  ಉಮಾತನಯನ ಸಂಭ್ರಮದಿ ಸ್ವಾಗತಿಸೋಣ.
ನಮ್ಮ ಮನದಲ್ಲಿ, ಮನೆಯಲ್ಲಿ ಪ್ರತಿಷ್ಠಾಪಿಸೋಣ.
ಭಕ್ತಿ ಪ್ರಿಯ ಆತ.  ಭಕ್ತಿಯಿಂದ ಪೂಜಿಸೋಣ.  ಬೇಡಿದ್ದು ಕೊಡುವವ ಮನೆಗೆ ಬಂದಿದ್ದಾನೆ.
ಬೇಕಾದ್ದು ಬೇಡೋಣ.  ಜ್ಞಾನ ಭಕ್ತಿ ವಿರಕ್ತಿಗಳು ಅಪರೂಪದ ವಸ್ತುಗಳು.  ಪರಮಾರ್ಥ ಸಾಧಕಗಳು. ಅವುಗಳನ್ನು ಗಣಪತಿಯಲ್ಲಿ ಯಾಚಿಸೋಣ.  ಧನ್ಯರಾಗೋಣ.
ಇಂತು ಗಣಪತಿ ಅಂತರ್ಗತ, ಮುಖ್ಯ ಪ್ರಾಣಾಂತರ್ಗತ, ವಿಶ್ವಂಭರ ಪರಮಾತ್ಮ ಅಭಿನ್ನ ಲಕ್ಷ್ಮೀ ನರಸಿಂಹ ದೇವರಿಗೆ ಶಿ.ಸಾ ನಮಸ್ಕರಿಸೋಣ.
ಸರ್ವರಿಗೂ ಗಣೇಶ ಚತುರ್ಥಿಯ ಶುಭಾಶಯಗಳು.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** Dr. ವಿಜೇಯೇಂದ್ರ ದೇಸಾಯಿ, ಧಾರವಾಡ.